

ಕಣಗಳನ್ನು ನಾಶ ಮಾಡುತ್ತದೆ. ಅಲ್ಲದೆ ಇನ್ಸುಲಿನ್ ಉತ್ಪತ್ತಿ ಆಗುವುದನ್ನು ತಡೆಯುತ್ತದೆ. ಇದನ್ನೇ ಟೈಪ್ 1 ಡಯಾಬಿಟಿಸ್ ಎಂದು ಕರೆಯುವುದು' ಎಂದು ವಿವರ ನೀಡುತ್ತಾರೆ ಶಿವಮೊಗ್ಗದ ಮ್ಯಾಕ್ಸ್ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಎಂಡೊಕ್ರೈನಾಲಜಿಸ್ಟ್ ಆಗಿರುವ ಡಾ. ಪ್ರವೀಣ್ ದೇವರಬಾವಿ ಅವರು.

'ಈ ಆಟೊ–ಇಮ್ಯೂನ್ ಡಿಸೀಸ್ ಮಕ್ಕಳಲ್ಲೇ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದರಿಂದ ಇವರನ್ನು 'ಅದೃಷ್ಟಹೀನ ಮಕ್ಕಳು (**unfortunate children**) ಎಂದು ಅನಿವಾರ್ಯವಾಗಿ ಕರೆಯಬೇಕಾಗುತ್ತದೆ' ಎಂದು ಖೇದ ವ್ಯಕ್ತಪಡಿಸುತ್ತಾರೆ ಈ ವೈದ್ಯರು.

'ಶೇ. 90ರಷ್ಟು ಪ್ರಕರಣಗಳಲ್ಲಿ ಟೈಪ್ 1 ಡಯಾಬಿಟಿಸ್‌ಗೆ ಕಾರಣಗಳನ್ನು ಇನ್ನೂ ವೈದ್ಯಲೋಕ ಸ್ಪಷ್ಟವಾಗಿ ಕಂಡುಹಿಡಿಯಲು ಸಾಧ್ಯವಾಗಿಲ್ಲ. ಶೇ.10ರಷ್ಟು ಪ್ರಕರಣಗಳು ಮಾತ್ರ ಬೇರೆ ಬೇರೆ ರೀತಿಯ ವೈರಸ್ ಸೋಂಕಿನಿಂದ ಬರುತ್ತದೆ. ಈ ವೈರಸ್ ಬೀಟಾ ಕಣಗಳನ್ನು ನಾಶ ಮಾಡುವುದರಿಂದ ಟೈಪ್1 ಡಯಾಬಿಟಿಸ್ ಬರಬಹುದು. ಕೆಲವೊಮ್ಮೆ ಹಸುವಿನ ಹಾಲಿನಿಂದಲೂ ಅನಾಮಧೇಯ ವೈರಸ್ ಸೋಂಕು ತಗುಲಬಹುದು. ಇದೇ ಕಾರಣಕ್ಕಾಗಿ ಮಕ್ಕಳ ತಜ್ಞರು ಚಿಕ್ಕ ಮಕ್ಕಳಿಗೆ ಹಸುವಿನ ಹಾಲು ಕುಡಿಸುವುದನ್ನು ತಪ್ಪಿಸಬೇಕು ಎಂದೂ ಹೇಳುತ್ತಾರೆ. ಇನ್ನೊಂದು ಮುಖ್ಯ ಅಂಶವೆಂದರೆ ಹೆಚ್ಚಿನ ಪ್ರಕರಣಗಳು 'ಈಡಿಯೊಪತಿಕ್' (ಕಾರಣವೇ ತಿಳಿಯದಿರುವುದು) ಆಗಿರುವುದು' ಎಂದು ವಿವರಿಸುತ್ತಾರೆ ಡಾ. ಪ್ರವೀಣ್.

## ನಿರ್ವಹಣೆ ಹೇಗೆ?

'ಹೆಚ್ಚಿನ ಮಕ್ಕಳಿಗೆ ಮಧುಮೇಹ ಬಂದಿರುವುದು ಗೊತ್ತೇ ಆಗುವುದಿಲ್ಲ. ಮಕ್ಕಳಲ್ಲಿ ವಿಪರೀತ ಬಳಲಿಕೆ ಬಂದಾಗ, ತೂಕ ಕಡಿಮೆಯಾದಾಗ ತಕ್ಷಣ ರಕ್ತಪರೀಕ್ಷೆ ಮಾಡಿಸಬೇಕು. ಇಲ್ಲವಾದರೆ ದೇಹದಲ್ಲಿ ನಿರ್ಜಲೀಕರಣ, ಉಸಿರಾಟದ ತೊಂದರೆ ಉಂಟಾಗಿ ಡಯಾಬಿಟಿಕ್ ಕೀಟೊ ಅಸಿಡೋಸಿಸ್ ಎಂಬ ಪ್ರಾಣಕ್ಕೆ ಹಾನಿಯಾಗುವ ತೊಂದರೆ ಬರುವ ಅಪಾಯವಿದೆ' ಎಂದು ಎಚ್ಚರಿಸುತ್ತಾರೆ ಡಾ. ಪ್ರವೀಣ್.

'ಮಕ್ಕಳಲ್ಲಿ ಮಧುಮೇಹ ಬಂದಾಗ ಇದರ ನಿರ್ವಹಣೆಯನ್ನು ಹೆತ್ತವರೇ ಮುತುವರ್ಜಿ ವಹಿಸಿ ಮಾಡಬೇಕಾಗುತ್ತದೆ. ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಪರೀಕ್ಷೆ ಮಾಡಿಸುತ್ತಿರಡಬೇಕು. ಇನ್ಸುಲಿನ್ ಚುಚ್ಚುಮದ್ದು ದಿನಕ್ಕೆ ನಾಲ್ಕು ಬಾರಿ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಜೀವನಪರ್ಯಂತ ತೆಗೆದುಕೊಳ್ಳಬೇಕು. ಈಗ ಇನ್ಸುಲಿನ್ ಪೆನ್ ಬಂದಿದೆ. ಅತ್ಯಂತ ತೆಳುವಾದ ಕೇವಲ ನಾಲ್ಕು ಎಂಎಂ ಸೂಜಿ ಬಂದಿದೆ. ಅತ್ಯಾಧುನಿಕ ತಂತ್ರಜ್ಞಾನವಾದ 'ಇನ್ಸುಲಿನ್ ಪಂಪ್ ಥೆರಪಿ' ಬಂದಿದೆ. ಇನ್ನೂ ಹೊಸ ಸಂಶೋಧನೆ ಎಂದರೆ 'ಆರ್ಟಿಫಿಷಿಯಲ್ ಪ್ಯಾಂಕ್ರಿಯಾಸ್' ಬಂದಿದೆ. ಜೊತೆಗೆ ವೈದ್ಯಲೋಕದಲ್ಲಿ ಸ್ಟೆಮ್‌ಸೆಲ್ ಥೆರಪಿ, ಬೀಟಾ ಸೆಲ್ ಟ್ರಾನ್ಸ್‌ಪ್ಲಾಂಟೇಷನ್ ಬಗ್ಗೆ ಸಂಶೋಧನೆಯೂ ನಡೆಯುತ್ತಿದೆ' ಎಂದು ಮಾಹಿತಿ ನೀಡುತ್ತಾರೆ ಅವರು. ■

## ಲಕ್ಷಣಗಳೇನು?

- ಅತಿಯಾದ ಬಾಯಾರಿಕೆ
- ಹೆಚ್ಚಿನ ದಣಿವು
- ಪದೇ ಪದೇ ಮೂತ್ರ ವಿಸರ್ಜನೆ ಮಾಡಬೇಕೆನಿಸುವುದು
- ತೂಕದಲ್ಲಿ ವ್ಯತ್ಯಾಸ
- ಅತಿಯಾದ ಹಸಿವು
- ಕೆಲವರಲ್ಲಿ ದೃಷ್ಟಿ ಮಂದ ಆದ ಅನುಭವ
- ಗಾಯಗಳಾಗಿದ್ದಲ್ಲಿ ಅದು ಗುಣವಾಗಲು ಬಹಳ ದಿನ ತೆಗೆದುಕೊಳ್ಳುವುದು.

## ಕ್ರಿಯಾಶೀಲತೆಗೆ ಅಡ್ಡಿಯಾಗದು

ಟೈಪ್ 1 ಡಯಾಬಿಟಿಸ್‌ನಿಂದ ದೈನಂದಿನ ಚಟುವಟಿಕೆಗಳಿಗೆ ಯಾವುದೇ ಹಾನಿಯಾಗದು. ಮಕ್ಕಳು ಸರಿಯಾಗಿ ಚಿಕಿತ್ಸೆ ಪಡೆಯುತ್ತಿದ್ದರೆ ಇತರ ಮಕ್ಕಳಂತೆ ಲವಲವಿಕೆಯಿಂದ ಇರಬಹುದು. ಹೆಣ್ಣುಮಕ್ಕಳು ಮದುವೆಯಾಗಿ ಆರಾಮವಾಗಿರಬಹುದು. ಹುಟ್ಟುವ ಮಕ್ಕಳಿಗೂ ಮಧುಮೇಹ ಬರುವ ಸಾಧ್ಯತೆ ಇಲ್ಲ. ಟೈಪ್ 1 ಮಧುಮೇಹ ಒಂದು ಲಕ್ಷ ಮಕ್ಕಳಲ್ಲಿ 10 ಮಂದಿಗೆ ಮಾತ್ರ ಬರಬಹುದು ಅಷ್ಟೆ.

ಸೆಲೆಬ್ರಿಟಿಗಳಲ್ಲಿ ಕ್ರಿಕೆಟ್‌ಪಟು, ಪಾಕಿಸ್ತಾನದ ಬೌಲರ್ ವಾಸಿಮ್ ಅಕ್ರಮ್ ಅವರಿಗೆ ಟೈಪ್ 1 ಮಧುಮೇಹವಿದ್ದರೂ ವಿಶ್ವಕಪ್‌ನಲ್ಲಿ ಆಡಿ ಗೆಲುವು ಸಾಧಿಸಿದ್ದನ್ನು ಮರೆಯುವಂತಿಲ್ಲ. ಬಾಲಿವುಡ್ ತಾರೆ ಸೋನಂ ಕಪೂರ್, ನಟ ಕಮಲಹಾಸನ್ ಅವರಿಗೂ ಟೈಪ್ 1 ಮಧುಮೇಹವಿದೆ. ಇವರೆಲ್ಲರೂ ಅತ್ಯಂತ ಕ್ರಿಯಾಶೀಲರಾಗಿದ್ದು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸುತ್ತಲೇ ಇದ್ದಾರೆ.